## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.

## ಸಿ.ಸಿ.ನಂ.31/2020

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಿವಪ್ಪ ಸಾಗರ | ಸಿಡಬ್ಲ್ಯೂ | 7 |
| ತಂದೆಯ ಹೆಸರು | ದುರ್ಗಪ್ಪ | ಪಿಡಬ್ಲ್ಯೂ | 7 |
| ವಯಸ್ಸು | 56 ವರ್ಷ | | |
| ಉದ್ಯೋಗ | ಪಿ.ಎಸ್.ಐ, ಕಾಗಿನೆಲೆ ಪೊಲೀಸ ಠಾಣೆ | | |
| ವಾಸಸ್ಥಳ | ಕಾಗಿನಲೆ | | |

**ದಿಃ06.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1) ನಾನು ದಿನಾಂಕಃ 04.03.2016 ರಿಂದ ದಿನಾಂಕಃ 20.05.2020 ರವರೆಗೆ ಹಾವೇರಿ ಶಹರ ಪೊಲೀಸ ಠಾಣೆಯಲ್ಲಿ ಎ.ಎಸ್.ಐ ಆಗಿ ಸೇವೆ ಸಲ್ಲಿಸಿದ್ದೇನೆ. ದಿನಾಂಕಃ 21.11.2019 ರಂದು ಚಾ.ಸಾ-17 ಅವರ ಜೊತೆಯಾಗಿ ಇಲಾಖಾ ಜೀಪಿನಲ್ಲಿ ನಾನು ಮತ್ತು ಚಾ.ಸಾ-8 ರಿಂದ 11 ಎಲ್ಲರೂ ಸೇರಿ ಠಾಣೆಯನ್ನು ಬೆಳಗಿನ 10-00 ಘಂಟೆಗೆ ಹೊರಟು ಪೆಟ್ರೋಲ್ ಡ್ಯೂಟಿ ಮಾಡಿ ಮಧ್ಯಾಹ್ನ 12-00 ಘಂಟೆಗೆ ಗುತ್ತಲ ಬ್ರಿಡ್ಜ ಹತ್ತಿರ ಇದ್ದಾಗ ಒಟ್ಟು 4 ಜನ ಎರಡು ಗಾಡಿಯಲ್ಲಿ ಗುತ್ತಲ ಕಡೆಯಿಂದ ಹಾವೇರಿ ಕಡೆಗೆ ಬರುತ್ತಿದ್ದರು. ನಂತರ 4 ಜನ ವ್ಯಕ್ತಿಗಳು ತಮ್ಮ ಮೋಟಾರ ಸೈಕಲಗಳನ್ನು ನಮ್ಮ ಜೀಪನ್ನು ಬಿಟ್ಟು ಓಡಿಹೋಗಲು ಪ್ರಯತ್ನಿಸಿರುತ್ತಾರೆ. ನಂತರ ನಮ್ಮ

ಇಲಾಖಾ ಜೀಪಿನಲ್ಲಿ ಇದ್ದ 4 ಜನ ಸಿಬ್ಬಂದಿಗಳು ಹಿಡಿದುಕೊಂಡು ಬಂದು ಆರೋಪಿಗಳನ್ನು ಚಾ.ಸಾ-17 ಇವರ ಮುಂದೆ ಹಾಜರುಪಡಿಸಿರುತ್ತಾರೆ.

2) ನಂತರ 4 ಜನ ಆರೋಪಿಗಳನ್ನು ಚಾ.ಸಾ-17 ಇವರು ವಿಚಾರಣೆ ಮಾಡಿದಾಗ 4 ಜನ ವ್ಯಕ್ತಿಗಳು ಎರಡು ಮೋಟಾರ ಸೈಕಲಗಳ ದಾಖಲಾತಿಗಳು ಅವರ ಮನೆಯಲ್ಲಿ ಇರುತ್ತವೆ ಎಂದು ತಿಳಿಸಿರುತ್ತಾರೆ. ನಂತರ 4 ಜನ ವ್ಯಕ್ತಿಗಳ ವಿಚಾರಣೆಗಾಗಿ ಹಾವೇರಿಯ ಶಹರ ಪೊಲೀಸ ಠಾಣೆಗೆ ಕರೆದುಕೊಂಡು ಬಂದಿರುತ್ತವೆ. ನಂತರ ಎರಡು ಮೋಟಾರ ಸೈಕಲಗಳನ್ನು ಹಾವೇರಿ ಶಹರ ಪೊಲೀಸ ಠಾಣೆಗೆ ಕರೆದುಕೊಂಡು ಬಂದಿರುತ್ತೇವೆ. ನಂತರ 4 ಜನ ವ್ಯಕ್ತಿಗಳನ್ನು ಚಾ.ಸಾ17 ಇವರ ವಿಚಾರಣೆ ಮಾಡಿದಾಗ 4 ಜನ ವ್ಯಕ್ತಿಗಳು ಅವರ ಜೊತೆ ತಂದ ಎರಡು ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು ತಿಳಿದುಕೊಂಡು ಅವರ ಹೇಳಿಕೆ ಪಡೆದುಕೊಂಡಿರುತ್ತೇವೆ . ನಂತರ ಆರೋಪಿಗಳು ಇತರೇ ಸ್ಥಳಗಳಲ್ಲಿ ಮೋಟಾರ ಸೈಕಲ ಕಳ್ಳತನ ಮಾಡಿ ಗುಜರಿಗೆ ಹಾಕಿರುತ್ತೇವೆ ಎಂದು ಚಾ.ಸಾ-17 ಇವರ ಮುಂದೆ ಹೇಳಿಕೆ ನೀಡಿದ್ದಾರೆ.

3) ಆರೋಪಿಗಳು ತಮ್ಮ ಜೊತೆ ತಂದಿರುವಂತಹ ಎರಡು ಮೋಟಾರ ಸೈಕಲ ನೋಡಿದರೆ ಗುರುತಿಸಬಲ್ಲೆ. 4 ಜನ ವ್ಯಕ್ತಿಗಳನ್ನು ನೋಡಿದರೆ ಗುರುತಿಸಬಲ್ಲೆ. ನ್ಯಾಯಾಲಯದ ಮುಂದೆ ಇರುವ 4 ಜನ ಆರೋಪಿತರೇ ನಾವು ಪೊಲೀಸ ಠಾಣೆಯಲ್ಲಿ ನೋಡಿದ ವ್ಯಕ್ತಿಗಳಾಗಿರುತ್ತಾರೆ.

**ಪಾಟೀ ಸವಾಲುಃ ಶ್ರೀ.ಸಿ.ಎಂ.ಎಸ್ ವಕೀಲರಿಂದಃ ಆರೋಪಿತರ ಪರವಾಗಿಃ**

4) ಚಾ.ಸಾ-17 ಇವರ ಯಾವ ದಿವಸ ಪೆಟ್ರೋಲಿಂಗಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ಪೆಟ್ರೋಲಿಂಗಗೆ ಹೋದಾಗ ನಮ್ಮ ಜೊತೆಯಲ್ಲಿ ಬಂದಂತಹ ಹಾವೇರಿ ಶಹರ ಸಿಬ್ಬಂದಿಗಳ ಎಲ್ಲ ವ್ಯಕ್ತಿಗಳ ಹೆಸರು ನೆನಪಿರುವದಿಲ್ಲ. ನಾವು ಪೆಟ್ರೋಲಿಂಗಗೆ ಹೋಗುವಾಗ ಚಾ.ಸಾ-17 ಇವರು ಮೂವಮೆಂಟ್ ರಿಜಿಸ್ಟರನಲ್ಲಿ

ಬರೆದಿರುತ್ತಾರೆ. ಚಾ.ಸಾ-17 ಇವರು ಮೂವಮೆಂಟ್ ರಿಜಿಸ್ಟರನಲ್ಲಿ ಪೆಟ್ರೋಲಿಂಗ್ ಡ್ಯೂಟಿಗೆ ಹೋಗಿರುವ ಕುರಿತಾಗಿ ಬರೆದಿರುವದನ್ನು ನಾನು ನೋಡಿದ್ದೇನೆ. ಸದರಿ ಮೂವಮೆಂಟ್ ರಿಜಿಸ್ಟರನಲ್ಲಿ ಚಾ.ಸಾ-17 ಇವರು ಮೇಲೆ ಮತ್ತು ಕೆಳಗಡೆ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ . ನಾವು ಪೆಟ್ರೋಲಿಂಗ ಡ್ಯೂಟಿಗೆ ಹೋದ ಜೀಪ ನಂಬರಃ ಕೆಎ-27/ಜಿ-414 ಆಗಿರುತ್ತದೆ.

5) ಸದರಿ ಜೀಪಿನ ನೊಂದಣಿ ಸಂಖ್ಯೆ ಕರಿ ಬಣ್ಣದ ನಂಬರ ಪ್ಲೇಟನಲ್ಲಿ ಬಿಳಿ ಬಣ್ಣದಿಂದ ಬರೆಯಲಾಗಿರುತ್ತದೆ. 1 ನೇ ಆರೋಪಿಯನ್ನು ನಮ್ಮ ಯಾವ ಸಿಬ್ಬಂದಿ ಹಿಡಿದುಕೊಂಡು ಬಂದಿರುತ್ತಾರೆ ಎಂದು ಅವರ ಹೆಸರು ನನಗೆ ನೆನಪಿಲ್ಲ. 4 ಜನ ವ್ಯಕ್ತಿಗಳು ತಮ್ಮ ಮೋಟಾರ ಸೈಕಲನ್ನು ಬಿಟ್ಟು ಹೋದ ಸ್ಥಳದಲ್ಲಿ ನಾವು ಪಂಚನಾಮೆಯನ್ನು ಮಾಡಿರುವದಿಲ್ಲ, ಆದರೆ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇವೆ. ರಸ್ತೆಯ ಮೇಲೆ ಎರಡು ಮೋಟಾರ ಸೈಕಲಗಳನ್ನು ಬಿಟ್ಟುಹೋದ 4 ವ್ಯಕ್ತಿಗಳು ಒಂದು ಮೋಟಾರ ಸೈಕಲನಲ್ಲಿ ಯಾವ ಯಾವ ಯಾವ ಆರೋಪಿ ಇದ್ದರು ಎಂದುಅ ವರ ಹೆಸರು ಹೇಳಲು ಆಗುವದಿಲ್ಲ. ಪೊಲೀಸ ಠಾಣೆಯಲ್ಲಿ ಮಾಡಿದಂತಹ ಜಪ್ತು ಪಂಚನಾಮೆಗೆ ನಾನು ಸಹಿ ಮಾಡಿರುವದಿಲ್ಲ. ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಚಾ.ಸಾ-17 ಇವರು ಯಾವ ದಿವಸ ತೆಗೆದುಕೊಂಡಿರುತ್ತಾರೆ ಎಂದು ನನಗೆ ನೆನಪಿಲ್ಲ, ಆದರೆ ದಿನಾಂಕಃ 22.11.2019 ರಂದು ಪಡೆದುಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಯಾವ ಗಾಡಿಯ ಯಾವ ಭಾಗಗಳನ್ನು ಹಾಜರುಪಡಿಸಿರುತ್ತಾರೆ ಎಂದು ನನಗೆ ಹೇಳಲು ಆಗುವದಿಲ್ಲ ಅಂದರೆ ಸರಿ.

6) ಚಾ.ಸಾ-17 ಇವರು ನಮ್ಮೆಲ್ಲರನ್ನೂ ನಮ್ಮ ಇಲಾಖಾ ಜೀಪಿನಲ್ಲಿ ಪೆಟ್ರೋಲಿಂಗ ಡ್ಯೂಟಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಹೇಳಿದಂತೆ ಆರೋಪಿಗಳು ಯಾವ ಮೋಟಾರ ಸೈಕಲನ ಯಾವ ಭಾಗಗಳನ್ನು ಗುಜರಿಗೆ ಹಾಕಲಾಗಿರುತ್ತದೆ ಎಂದು ಈಗ ಹೇಳಲು ಬರುವದಿಲ್ಲ. 5 ಮತ್ತು 6 ನೇ ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ಅವರ ವಿರುದ್ಧ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಎಲ್ಲ ಸಂಗತಿಗಳು ಸುಳ್ಳಾಗಿರುತ್ತವೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಎನ್.ಜಿ.ಹೆಚ್ 2 ನೇ ಆರೋಪಿ ಪರವಾಗಿಃ 5 ಮತ್ತು 6 ನೇ ಆರೋಪಿ ಪರ ವಕೀಲರು ಮಾಡಿದಂತಹ ಪಾಟೀ ಸವಾಲನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಾರೆ.**

**ಪಾಟೀ ಸವಾಲುಃ ಶ್ರೀ.ಪಿ.ಜಿ.ಪಿ ವಕೀಲರು 4 ನೇ ಆರೋಪಿ ಪರವಾಗಿಃ 5 ಮತ್ತು 6 ನೇ ಆರೋಪಿ ಪರ ವಕೀಲರು ಮಾಡಿದಂತಹ ಪಾಟೀ ಸವಾಲನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.